ಕುಳಿತುಕೊಂಡಿತು. ಪಕ್ಕದ ದಿಬ್ಬದಲ್ಲಿ ಆನೆ ಮಂಗನನ್ನು ವೀಕ್ಷಿಸುತ್ತಿತ್ತು. ದೂರದಲ್ಲಿ ಘುರ್ ಘುರ್ ಹುಲಿಯನ್ನು ನೋಡಿದ ಮಂಗ ಹಲ್ಲು ಕಿರಿಯತೊಡಗಿತು. ಇದನ್ನು ಕಂಡ ಆನೆ ಘೀಳಿಟ್ಟಿತು. ಪೊದೆಯ ಮರೆಯಲ್ಲಿದ್ದ ಜಿಂಕೆ ಹುಲಿಯ ಅಕ್ಕ ಪಕ್ಕದಲ್ಲಿ ಸುಳಿಯತೊಡಗಿತು. ಇದಾವುದನ್ನೂ ಗಮನಿಸದ ಹುಲಿಯ ಬಾಯಿಯಲ್ಲಿ, ಕೊಬ್ಬಿದ ಜಿಂಕೆಯನ್ನು ಕಂಡು ಜೊಲ್ಲು ಸುರಿಯತೊಡಗಿತು. ಜಿಂಕೆಯ ಬಳಿಗೆ ಹೊಂಚು ಹಾಕಿ ಬರತೊಡಗಿತು. ವಾರೆಗಣ್ಣಿನಿಂದ ಗಮನಿಸುತ್ತಿದ್ದ ಜಿಂಕೆ ಛಂಗನೇ ಮುಂದಕ್ಕೆ ಜಿಗಿದು ಓಡತೊಡಗಿತು. ಹಿಂದೆಯೇ ಹುಲಿ ಬೆನ್ನಟ್ಟಿಕೊಂಡು ಬಂತು. ಮೊದಲೇ ಯೋಜಿಸಿದಂತೆ ಒಮ್ಮೆ ಸಮೀಪದಲ್ಲಿ, ಮತ್ತೊಮ್ಮೆ ದೂರದಲ್ಲಿ ಓಡಿ ಜಿಂಕೆ ತಪ್ಪಿಸಿಕೊಳ್ಳುತ್ತಿತ್ತು.

ಅದು ಓಡಿ ಓಡಿ ಕಾಡುಕೋಣಗಳ ಹಿಂಡಿರುವ ಪ್ರದೇಶಕ್ಕೆ ಬಂತು. ಕೋಣಗಳ ನಡುವೆ ಹಾದಿ ಮಾಡಿಕೊಂಡು ನುಗ್ಗಿತು. ಉದ್ವೇಗದಲ್ಲಿದ್ದ ಹುಲಿ ಇದಾವುದನ್ನೂ ಗಮನಿಸದೆ ತಾನೂ ಜಿಂಕೆಯ ಹಿಂದೆ ಓಡಿ ಕೋಣಗಳ ನಡುವೆ ಸಿಕ್ಕಿ ಹಾಕಿಕೊಂಡಿತು. ಮೊದಲೇ ಇದಕ್ಕಾಗಿ ಕಾಯುತ್ತಿದ್ದ ಕೋಣಗಳು ಹುಲಿಯನ್ನು ಸುತ್ತುವರಿದು ಕೊಂಬುಗಳಿಂದ ಮೇಲಕ್ಕೆತ್ತಿ ಬಿಸಾಕತೊಡಗಿದವು. ಇದನ್ನು ನಿರೀಕ್ಷಿಸದ ಹುಲಿ ಗಾಬರಿಯಾಗಿ ಪಾರಾಗಲು ಪ್ರಯತ್ನಿಸಿತು. ಆದರೆ ಅದು ಸಾಧ್ಯವಾಗಲಿಲ್ಲ. ಕೋಣಗಳಿಂದ ತಿವಿಸಿಕೊಂಡು ರಕ್ತಸಿಕ್ತವಾಗಿ ನರಳತೊಡಗಿತು.

ಕೊನೆಯುಸಿರೆಳೆಯುತ್ತಿದ್ದ ಘುರ್ ಘುರ್ ಹುಲಿಯನ್ನು ಸಮೀಪದ ಗುಡ್ಡದಿಂದ ಕೋಣಗಳು ಕೆಳಕ್ಕೆ ತಳ್ಳಿದವು. ಈಗ ಎಲ್ಲ ಪ್ರಾಣಿಗಳು ಹುಲಿಯ ಕಾಟ ತಪ್ಪಿದ್ದಕ್ಕೆ ಖುಷಿಯಿಂದ ಕುಣಿದಾಡಿ ಹಬ್ಬ ಆಚರಿಸಿದವು. ಕೇಕ್ ಕತ್ತರಿಸಿ ಕಾಡುಕೋಣಗಳಿಗೆ ಸನ್ಮಾನ ಮಾಡಿದವು. ■

# ಮಳೆ ಬಂತು

ಟಪ ಟಪ ಟಪ ಟಪ
ಸದ್ದಾಯ್ತು
ಕಿಚಿ ಪಿಚಿ ಕಿಚಿ ಪಿಚಿ
ಕೆಸರಾಯ್ತು

ಲಕ ಲಕ ಲಕ ಲಕ
ಹೊಳೆ ಮಿಂಚ್ತು
ಬನ ಬನ ಬನ ಬನ
ಹಸುರುಕ್ತು

ಫಳ ಫಳ ಫಳ ಫಳ
ಮಿಂಚ್ಹರಿತು
ಗುಡು ಗುಡು ಗುಡು ಗುಡು
ಗುಡುಗುಡ್ತು

ಚಿಲಿ ಪಿಲಿ ಚಿಲಿ ಚಿಲಿ
ಖಗ ಉಲಿತು
ತಪ ತಪ ತಪ ತಪ
ಮಿಗ ತೊಯ್ತು

ಹಸಿ ಹಸಿ ಹಸಿ ಹಸಿ ಹಸಿ
ಧರೆಗಾಯ್ತು
ಖುಷಿ ಖುಷಿ ಖುಷಿ ಖುಷಿ
ನಮಗಾಯ್ತು

ಹನಿ ಹನಿ ಹನಿ ಹನಿ
ಮಳೆ ಬಂತು
ದಳ ದಳ ದಳ ದಳ
ಸುರಿದೋತು

ಜುಳು ಜುಳು ಜುಳು ಜುಳು
ಹಳ್ಳರಿತು
ಭರ ಭರ ಭರ ಭರ
ಕೆರೆ ತುಂಬ್ತು

■ ಸೋಮಲಿಂಗ ಬೇಡರ


ಮಂಜುನಾಥ ಹುಲಕೊಪ್ಪದ

ವಿಜಯಕುಮಾರಿ


# ಭೂರಮೆ ಕಲ್ಯಾಣ

■ ಡಾ. ಕೆ.ಬಿ. ರಂಗಸ್ವಾಮಿ

ಧಾಂ ಧೂಂ ಎನ್ನುತ ಬಂದಿತು
ಮಳೆರಾಯನ ಮದುವೆ ದಿಬ್ಬಣ
ಆಗಸದರಮನೆ ಹೆಬ್ಬಾಗಿಲಿಗೆ
ಕಾಮನಬಿಲ್ಲಿನ ಕಮಾನು ತೋರಣ
ಕಪ್ಪು ಬಿಳುಪು ವೇಷವ ಧರಿಸಿದ
ಮೇಘದೂತರ ಥಕಧಿಮಿ ನರ್ತನ
ಢಂ ಢಂ ಢಂ ಢಂ ಸದ್ದು ಮೊಳಗಿತು
ಸಿಡಿಮದ್ದುಗಳ ಸಿಡಿತದಿ ಕ್ಷಣಕ್ಷಣ
ಮಿಣ ಮಿಣ ಮಿನುಗುವ ಮಿಂಚಿನಮಾಲೆ
ಬಿಮ್ಮನೆ ಬರುತಿಹ ವರನ ಕೊರಳಲಿ
ಗರಿಗಳ ಬಿಚ್ಚಿದ ಮಯೂರ ವೃಂದ
ಸ್ವಾಗತ ಕೋರಿತು ಹಸಿರು ವನದಲಿ
ವೇದಮಂತ್ರಗಳ ಘೋಷದ ನಡುವೆ
ಭೂರಮೆ ಕಲ್ಯಾಣ ವಿಜೃಂಭಣೆಯಲಿ
ಕಿಲಕಿಲ ನಗುತಾ ಮರಗಿಡಬಳ್ಳಿ
ಹಾಡಿ ಹರಸಿದವು ಸಂಭ್ರಮದಲಿ.